**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ :: 270/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಸುಬ್ರಮಣ್ಯ | **PW**-02 |
| **ತಂದೆಯ ಹೆಸರು** | : | ಮಂಜಪ್ಪ | **CW**-02 |
| **ವಯಸ್ಸು** | : | 32 | |
| **ಉದ್ಯೋಗ** | : | ಲಾಡ್ಜ್ ನಲ್ಲಿ ಕೆಲಸ. | |
| **ವಾಸಸ್ಥಳ** | : | ಶೃಂಗೇರಿ . | |

**ದಿನಾಂಕಃ23-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

1. ಈ ಪ್ರಕರಣದಲ್ಲಿ ಕಳ್ಳತನವಾಗಿರುವ ವಿಚಾರದ ಬಗ್ಗೆ ನನಗೆ ತಿಳಿದಿರುತ್ತದೆ. ನಾನು ಶುಭೋದಯ ಲಾಡ್ಜ್ ನಲ್ಲಿ ಕೆಲವು ಕಾಲ ರೂಮ್ ಬಾಯ್ ಆಗಿ ಕೆಲಸ ನಿರ್ವಹಿಸಿದ್ದೆ. ಆ ಸಂದರ್ಭದಲ್ಲಿ ಸದರಿ ಲಾಡ್ಜ್ ನ ರೂಮ್ ನಂ.208 ರಲ್ಲಿ ಒಂದು ಟಿ.ವಿ ಕಳ್ಳತನವಾಗಿರುವ ಬಗ್ಗೆ ನನಗೆ ಚಾಸಾ-4 ರವರಿಂದ ತಿಳಿದು ಬಂದಿರುತ್ತದೆ. ಆ ಸಂದರ್ಭದಲ್ಲಿ ಪೋಲೀಸರು ಲಾಡ್ಜ್ ಗೆ ಬಂದಿದ್ದರು. ಆಗ ನಾನು ಒಂದು ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ಮುಂದುವರಿದು, ನನಗೆ ಆ ದಾಖಲೆಯನ್ನು ಏನು ವಿಚಾರ ಬರೆದಿದೆ ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಚಾಸಾ-3 ರವರು ಸಹ ಹಾಜರಾಗಿ ಸಹಿ ಮಾಡಿದ್ದರು ಎಂದು ನುಡಿಯುತ್ತಾರೆ. ನಾನು ಸದರಿ ದಾಖಲೆಗೆ ಸಹಿಯನ್ನು 2018 ನೇ ಸಾಲಿನಲ್ಲಿ ಮಾಡಿರುತ್ತೇನೆ. ನಿರ್ದಿಷ್ಟವಾಗಿ ದಿನಾಂಕ ನೆನಪಿರುವುದಿಲ್ಲ. ಸದರಿ ಮಹಜರ್ ಅನ್ನು ಸಂಜೆ 6.00 ರಿಂದ 7.00 ಗಂಟೆ ವರೆವಿಗೂ ಬರೆದಿರುತ್ತಾರೆ. ನಾನು ಈ ಪ್ರಕರಣದಲ್ಲಿ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು).

**::ಪಾಟೀಸವಾಲು :: A.P.P ರವರಿಂದ ::**

ದಿಃ07-02-2018 ರಂದು ನಾನು ಸ್ಥಳ ಮಹಜರ್ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮೂಲ ದಾಖಲೆಯಲ್ಲಿರುವ ಸ್ಥಳ ಮಹಜರ್ ಅನ್ನು ತೋರಿಸಿ ಅದರಲ್ಲಿರುವ ಸಹಿಯ ಬಗ್ಗೆ ಕೇಳಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಒಪ್ಪಿರುತ್ತಾರೆ. ಸದರಿ ಸಹಿ ಈಗಾಗಲೇ ನಿಪಿ-3(ಬಿ) ಎಂದು ಗುರುತಿಸಲಾಗಿರುತ್ತದೆ. ನನಗೆ ಸದರಿ ಮೂಲ ಕಡತದಲ್ಲಿರುವ ಈಗಾಗಲೇ ನಿಶಾನೆ ಗೊಂಡಿರುವ ನಿಪಿ-3 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಕಡತದಲ್ಲಿರುವ ಧೃಡೀಕೃತ ಸ್ಥಳ ಮಹಜರ್ ಅನ್ನು ನಿಪಿ -2 ಎಂದು ಗುರುತಿಸಲಾಯಿತು. ಈ ಪ್ರಕರಣದ ನಿಪಿ -2 ರ ಸ್ಥಳ ಮಹಜರ್ ಅನ್ನು ಪೋಲೀಸರು ಸ್ಥಳದಲ್ಲಿಯೇ ಸಂಜೆ ದಿಃ07-02-2018 ರಂದು ಸಂಜೆ 6.15 ರಿಂದ 7.00 ಗಂಟೆಯವರೆಗೂ ಬರೆದುಕೊಂಡರು ಎಂದರೆ ಸರಿ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::**

ಶುಭೋದಯ ಲಾಡ್ಜ್ ನ ಅಕ್ಕ-ಪಕ್ಕ ನರ್ತಕಿ ಬಾರ್ ಮತ್ತು ಹೋಟೇಲ್ ಮತ್ತು ಎದುರುಗಡೆ ಪೆಟ್ರೋಲ್ ಬಂಕ್ ಇದೆ ಎಂದರೆ ಸರಿ. ಸದರಿ ಸ್ಥಳವು ಜನ ನಿಬಿಡ ಸ್ಥಳ ಆಗಿರುತ್ತದೆ ಎಂದರೆ ಸರಿ. ಚಾಸಾ-1 ಶುಭೋದಯ ಲಾಡ್ಜ್ ನ ನನ್ನ ಮಾಲೀಕರು ಮತ್ತು ಅವರು ನನಗೆ ಕೆಲಸ ನೀಡಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಹೇಳಿದ್ದರಿಂದ ನಾನು ಸ್ಥಳ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಸ್ಥಳ ಮಹಜರ್ ನಲ್ಲಿ ಏನು ವಿಚಾರ ಬರೆದಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ಈ ಹಿಂದೆ ಸಿ.ಸಿ ನಂಬರ್ 238/2018 ರಲ್ಲಿ ನೀಡಿದ ಸಾಕ್ಷ್ಯ ಸತ್ಯವಾಗಿ ನೀಡಿರುತ್ತೇನೆ ಎಂದರೆ ಸರಿ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.